## ಬ್ಲೌಸ್ ಇಕೊಳಿ...

ಕಚೇರಿಗೆ ಹೋಗಲೆಂದು ಬೈಕ್ ಹೊರಗೆ ತೆಗೆದಾಗ ತುಂತುರು ಮಳೆ ಬರುತ್ತಿರುವುದು ಕಾಣಿಸಿತು. ಗ್ಲೌಸ್ ಕೊಡೆಂದು ಕೆಲಸದಾಕೆಗೆ ಹೇಳಿದೆ. ನನ್ನಾಕೆ ಸ್ನಾನಕ್ಕೆ ಹೋಗಿದ್ದರಿಂದ ಕೆಲಸದವಳಿಗೆ ಗ್ಲೌಸ್ ಯಾವುದೆಂದು ತಿಳಿಯದೆ ಆಗತಾನೆ ತೊಳೆಯಲು ಇಟ್ಟ ಬಟ್ಟೆಗಳ ರಾಶಿಯಿಂದ ಬ್ಲೌಸ್ ತಂದು 'ಇಕೊಳಿ' ಎಂದು ಹಲ್ಲು ಕಿರಿದಳು!

**ಗುರುದೇವ ಭಂಡಾರ್ಕರ್**



## ಸಸ್ಯಾಹಾರಿ ಅವಾಂತರ

ಬಟಾಟೆ ಸೋಂಗ್ ತಯಾರಿಸುವುದರಲ್ಲಿ ನಮ್ಮತ್ತೆ ಎತ್ತಿದ ಕೈ. ಇದೊಂದು ಬಗೆಯ ಕೊಂಕಣಿ ಖಾದ್ಯ. ಅತ್ತೆ ಅದನ್ನು ಬಹಳ ರುಚಿಯಾಗಿ ಮಾಡುತ್ತಿದ್ದರು. ಇದನ್ನು ನನ್ನ ಗೆಳತಿಗೆ ಆಗಾಗ ಹೇಳುತ್ತಲೇ ಇದ್ದೆ.

ಒಮ್ಮೆ ನಮ್ಮತ್ತೆ ಕೈಯಲ್ಲಿ ಚಪಾತಿ ಹಾಗೂ ಸೋಂಗ್ ಮಾಡಿಸಿ ಅವಳನ್ನು ಉಪಹಾರಕ್ಕೆ ಕರೆದೆ. ನಾವಿಬ್ಬರೂ ಡೈನಿಂಗ್ ಟೇಬಲ್ ಮುಂದೆ ಕುಳಿತೆವು. ನಮ್ಮತ್ತೆ, 'ಪಳೆ ಸೋಂಗ್ ಎದೆ ಕೆಲ್ಲಾ; ತಿಕ್ಕಾ ಕೆಲ್ಲಾ; ತೊಡೆ ವಾಡತಾ' ಎಂದು ಹೇಳಿದರು.

ಕೂಡಲೇ ನನ್ನ ಗೆಳತಿ, 'ನನಗೆ ಈ ಸೋಂಗ್ ಬೇಡ, ಬಂದ ತಪ್ಪಿಗೆ ಚಪಾತಿ ತುಪ್ಪ ತಿನ್ನುತ್ತೇನೆ' ಎಂದಳು. ಅವಳ ಗಾಬರಿ ಕಂಡು ನಾನು 'ಏನಾಯಿತು' ಅಂದೆ. 'ನಾನು ವೆಜ್ ಅಂತ ನಿನಗೆ ಗೊತ್ತಿಲ್ಲವೇ? ನಿಮ್ಮತ್ತೆ ಅದೇನೊ ಎದೆ, ತೊಡೆ, ತಿಕ್ಕಾ ಅಂತೆಲ್ಲಾ ಹೇಳ್ತಾ ಇದ್ದಾರೆ' ಎಂದಳು.



ಅದಕ್ಕೆ ನಾನು, 'ಕೊಂಕಣಿ ಭಾಷೆಯಲ್ಲಿ ತೊಡೆ ಅಂದರೆ ಸ್ವಲ್ಪ, ಎದೆ ಅಂದರೆ ಸಣ್ಣ ಪ್ರಮಾಣ, ತಿಕ್ಕಾ ಅಂದರೆ ಭಾರಿ ಖಾರ ಎಂದು ಅರ್ಥ. ಸೋಂಗ್ ಸ್ವಲ್ಪ ಮಾಡಿದ್ದೇನೆ, ಭಾರಿ ಖಾರ ಆಗಿದೆ. ಅದನ್ನು ಸಣ್ಣ ಪ್ರಮಾಣದಲ್ಲಿ, ಬಡಿಸುತ್ತೇನೆ ಎಂದು ಅವರು ಹೇಳಿದ್ದು' ಎಂದು ವಿವರಿಸಿದ ಮೇಲೆ ಅವಳು ಚಪ್ಪರಿಸಿ ತಿಂದು ಖುಷಿ ಪಟ್ಟಳು.

**ಜಯಮಾಲಾ ಪೈ**